# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ (ಆ) ಶಾಖೆ: ಕೇಂದ್ರ ಕಛೇರಿ: 2ನೇ ಮಹಡಿ, ಕೆ.ಹೆಚ್.ರಸ್ತೆ
ಶಾಂತಿನಗರ: ಬೆಂಗಳೂರು 560027

ಇ-ಮೇಲ್ : ctmo@mybmtc.com Ph No: 080-22537559

ಸಂಖ್ಯೆ/ಬೆಂ.ಮ.ಸಾ.ಸಂಸ್ಥೆ/ಕೇಕ/ಸಂಚಾರ (ಆ)/ 1420 /2022-23 ದಿನಾಂಕ: 1/05/2022 9

ರವರಿಗೆ,
ಡಾ॥ ವಿಕ್ಟರ್ ಲೋಬೋ. ಎಸ್.ಜೆ
ಪ್ರಾಂಶುಪಾಲರು,
ಸಂತ ಜೋಸೆಪ್ಸ್ ಕಾಲೇಜು (ಸ್ವಾಯತ್ತ)
ಪಿ.ಓ ಬಾಕ್ಸ್-27094, ನಂ.36
ಲಾಲ್‌ಬಾಗ್ ರಸ್ತೆ, ಬೆಂಗಳೂರು-560027

**ಮಾನ್ಯರೇ,**

**ವಿಷಯ:** ಮಾರ್ಗ ಸಂಖ್ಯೆ 145 ಮತ್ತು 146 ಗಳಲ್ಲಿ ಸಾರಿಗೆಗಳನ್ನು ಪುನರಾರಂಭಿಸಿರುವ ಕುರಿತು.
**ಉಲ್ಲೇಖ:** ಸಂಜೋಕಾ/ಆವಿ/ಬೆಂಗಮನಸಾ/ಬ/01/2022-23 ದಿನಾಂಕ 24.08.2022.

********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿವೇಕನಗರ ಮತ್ತು ನೀಲಸಂದ್ರ ಬಸ್ ನಿಲ್ದಾಣದಿಂದ ನಂಜಪ್ಪ ವೃತ್ತ/ಶಾಂತಿನಗರ, ಅಕ್ಕಿತಿಮ್ಮನಹಳ್ಳಿಯ (ಲಾಂಗ್ ಪೋರ್ಟ್ ರಸ್ತೆ) ಮೂಲಕ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ವಿದ್ಯಾರ್ಥಿ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಸಾರಿಗೆಗಳನ್ನು ಒದಗಿಸುವಂತೆ ಕೋರಿ ಸಲ್ಲಿಸಲಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ಈ ಸಂಬಂಧ, ವಿವೇಕನಗರ ಹಾಗೂ ನೀಲಸಂದ್ರ ಬಸ್ ನಿಲ್ದಾಣದಿಂದ ನಂಜಪ್ಪ ವೃತ್ತ/ಶಾಂತಿನಗರ, ಅಕ್ಕಿತಿಮ್ಮನಹಳ್ಳಿಯ (ಲಾಂಗ್ ಪೋರ್ಟ್ ರಸ್ತೆ) ಮೂಲಕ ಕೆಂಪೇಗೌಡ ಬಸ್ ನಿಲ್ದಾಣಕ್ಕೆ, ಮಾರ್ಗ ಸಂಖ್ಯೆ 145 ಮತ್ತು 146 ರಲ್ಲಿ ತಲಾ ಒಂದೊಂದು ಸಾರಿಗೆಗಳನ್ನು ದಿನಾಂಕ 29.08.2022 ರಿಂದ ಅನ್ವಯಿಸುವಂತೆ ಪುನರಾರಂಭಿಸಿ, ದಿನವೊಂದಕ್ಕೆ 24 ಏಕಮುಖ ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸದರಿ ಸಾರಿಗೆಗಳ ಪ್ರಯೋಜನ ಪಡೆಯಬಹುದಾಗಿದೆ ಎಂಬ ಮಾಹಿತಿಯನ್ನು ಈ ಮೂಲಕ ತಿಳಿಯಬಯಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಮುಖ್ಯ ಸಂಚಾರ ವ್ಯವಸ್ಥಾಪಕರು (ಆ)
ಬೆಂ.ಮ.ಸಾ.ಸಂಸ್ಥೆ.